ಆರ್‌ಬಿಐ / 2005 –06 / 181
ಉಲ್ಲೇಖ .ಡಿಪಿಎಸ್‌ಎಸ್ (ಸಿಒ) ಸಂಖ್ಯೆ .590 / 01. 01.15 / 2005

ಅಕ್ಟೋಬರ್ 17, 2005

ವಿದ್ಯುನ್ಮಾನ ತೀರುವಳಿ ಸೇವೆಗಳಲ್ಲಿ ಭಾಗವಹಿಸುತ್ತಿರುವ
ಎಲ್ಲ ಬ್ಯಾಂಕುಗಳ ಅಧ್ಯಕ್ಷರು / ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು

ಮಾನ್ಯರೇ,

**ವಿದ್ಯುನ್ಮಾನ ತೀರುವಳಿ ಸೇವೆಗಳು ( ಇಸಿಎಸ್)**

ವಿದ್ಯುನ್ಮಾನ ತೀರುವಳಿ ವ್ಯವಸ್ಥೆಯನ್ನು, ಸರ್ಕಾರಿ ಇಲಾಖೆಗಳು, ಕಾರ್ಪೊರೇಟ್ ಸಂಸ್ಥೆಗಳು ಮುಂತಾದ ವಿವಿಧ ಬಳಕೆದಾರರು, ಸಂಬಳ, ನಿವೃತ್ತಿ ವೇತನ, ಲಾಭಾಂಶ, ಬಡ್ಡಿ ಮುಂತಾದ ಪದೇ ಪದೇ ಮಾಡುವ ಸಂದಾಯಗಳಿಗೆ ಹೆಚ್ಚು ಹೆಚ್ಚಾಗಿ ಬಳಸುತ್ತಿದ್ದಾರೆ.

2. ಬಳಕೆದಾರರು ಮತ್ತು ಫಲಾನುಭವಿ ಗ್ರಾಹಕರು ಇಬ್ಬರಿಗೂ ಇಸಿಎಸ್ ತುಂಬಾ ಅನುಕೂಲಕರವಾದ ವ್ಯವಸ್ಥೆ ಎಂದು ರುಜುವಾತಾಗಿರುವಂತೆಯೇ ದೂರುಗಳ ಸಂಖ್ಯೆಯಲ್ಲೂ ಹೆಚ್ಚಳವಾಗುತ್ತಿದೆ. ಮುಖ್ಯ ದೂರೆಂದರೆ ಇಸಿಎಸ್ ನಮೂದುಗಳಿಗೆ ಸಂಬಂಧಿಸಿದಂತೆ ಪಾಸ್ ಪುಸ್ತಕದಲ್ಲಿ / ಖಾತೆಗಳ ತ:ಖ್ತೆಯಲ್ಲಿ ಬ್ಯಾಂಕುಗಳು ಒದಗಿಸುವ ವಿವರಗಳು ಅಪೂರ್ಣವಾಗಿರುತ್ತವೆ ಮತ್ತು ವಿವರಗಳ ಅಲಭ್ಯತೆಯಿಂದಾಗಿ ಗ್ರಾಹಕರು ವ್ಯವಹಾರಗಳನ್ನು ಹೊಂದಾಣಿಕೆ ಮಾಡಿಕೊಳ್ಳುವುದಕ್ಕೆ ತುಂಬಾ ತೊಂದರೆಯಾಗುತ್ತಿದೆ. ಸಾರ್ವಜನಿಕ ಸೇವೆಗಳ ಕಾರ್ಯ ವಿಧಾನಗಳು ಮತ್ತು ಸಾಧನೆಯ ಪರಿಶೋಧನಾ ಸಮಿತಿಯು (ಸಿಪಿಪಿಎಪಿಯಸ್–ತಾರಾಪುರೆ ಸಮಿತಿ)ವಿವರಪಟ್ಟಿಗಳಲ್ಲಿ ವ್ಯವಹಾರಗಳ ಪೂರ್ಣ ವಿವರಗಳನ್ನು ಒದಗಿಸಬೇಕಾದ ಅಗತ್ಯವನ್ನು ಒತ್ತಿ ಹೇಳಿರುವುದನ್ನು ನೀವು ಮೆಚ್ಚುತ್ತೀರಿ.

3.ಇಸಿಎಸ್ ವರದಿಯಲ್ಲಿ (ಕಾಗದ ಮತ್ತು ವಿದ್ಯುನ್ಮಾನ) ಖಾತೆಯ ವಿವರಪಟ್ಟಿಗಳಲ್ಲಿ ವಿವರಗಳನ್ನು ಒದಗಿಸುವುದಕ್ಕೆ ಅನುಕೂಲ ಕಲ್ಪಿಸಲು ಬ್ಯಾಂಕುಗಳಿಗೆ ಬಳಕೆದಾರನ ಹೆಸರಿನ ಒಂದು ಚಿಕ್ಕ ಸಂಕೇತಾಕ್ಷರವನ್ನು ಒದಗಿಸಲಾಗಿದೆ. ಈ ಸಂಕೇತಾಕ್ಷರವನ್ನು ಸೂಕ್ತವಾಗಿ ಹೆಕ್ಕಿ ಬಳಸಿಕೊಳ್ಳಬಹುದಾಗಿದೆ.

4.ಮೇಲಿನ ದೃಷ್ಟಿಯಿಂದ ಗ್ರಾಹಕರಿಗೆ ಅವರ ಪಾಸ್ ಪುಸ್ತಕದಲ್ಲಿ / ಖಾತೆಯ ವಿವರಪಟ್ಟಿಯಲ್ಲಿ ಇಸಿಎಸ್ ಮೂಲಕ ಮಾಡಿದ ಜಮೆಗಳಿಗೆ ಸಂಬಂಧಿಸಿದಂತೆ ಅಗತ್ಯವಾದ ವಿವರಗಳನ್ನು ಒದಗಿಸುವಂತೆ ನಿಮ್ಮ ಶಾಖೆಗಳಿಗೆ ದಯವಿಟ್ಟು ಸೂಕ್ತ ಸೂಚನೆಗಳನ್ನು ನೀಡತಕ್ಕದ್ದು. ಮೇಲಿನ ವ್ಯವಸ್ಥೆಯನ್ನು ಸರಳೀಕರಿಸಲು ಸೂಕ್ತ ತಂತ್ರಜ್ಞಾನ ಪರಿಹಾರಗಳನ್ನು ಸಹಾ ಅಳವಡಿಸಿಕೊಳ್ಳಬಹುದು.

5.ಅಂತೆಯೇ ಇಎಫ್‌ಟಿ, ಎಸ್‌ಇಎಫ್‌ಟಿ, ಆರ್‌ಟಿಜಿಎಸ್ ಮುಂತಾದ ಇತರ ವಿದ್ಯುನ್ಮಾನ ಸಂದಾಯ ಉತ್ಪನ್ನಗಳಿಗೆ ಸಂಬಂಧಿಸಿದಂತೆ ರವಾನೆದಾರನ / ರವಾನೆಯ ವಿವರಗಳನ್ನು ಪಡೆದುಕೊಳ್ಳಲು ಇದೇ ರೀತಿಯ ಮಾರ್ಗವನ್ನು ಅಳವಡಿಸಿಕೊಳ್ಳಬಹುದು.

**ತಮ್ಮ ವಿಶ್ವಾಸಿ,**
**ಸಹಿ**
**(ಕಾಜಾ ಸುಧಾಕರ್ )**
**ಪ್ರಧಾನ ವ್ಯವಸ್ಥಾಪಕರು**